# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ

## ಸಿ.ಸಿ. ನಂ. 50/2024

ಸಿಡಬ್ಲ್ಯೂ- 1
ಪಿಡಬ್ಲ್ಯೂ-1

ದಿನಾಂಕಃ **16.10.2025.**

ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು

| | | |
|---|---|---|
| ಸಾಕ್ಷಿಯ ಹೆಸರುಃ | - | ಮಹೆಮೂದ್ ಪಟೇಲ್ |
| ತಂದೆಯ ಹೆಸರುಃ | - | ಮೌಲಾನಸಾಬ್ |
| ವಯಸ್ಸುಃ | -? | 25 ವರ್ಷ |
| ಉದ್ಯೋಗಃ | - | ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಲ್ಲಿ ಬೆರಳಚ್ಚುಗಾರ ಯಾದಗಿರಿ. |
| ವಾಸಸ್ಥಳಃ | - | ಯಾದಗಿರಿ. |

ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದಃ

ಕಳೆದ ಒಂದು ವರ್ಷ 3 ತಿಂಗಳನಿಂದ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಲ್ಲಿ ಬೆರಳಚ್ಚುಗಾರನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಚಾಸಾ-**6** ರವರ ಪರಿಚಯ ನನಗೆ ಇರುತ್ತದೆ. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಯಾದಗಿರಿ ರವರಿಗೆ ಸರಕಾರದಿಂದ ಒಂದು ಮೊಬೈಲ್ ನ್ನು ಉಚಿತವಾಗಿ ನೀಡಿದ್ದರು. ಸದರಿ ಮೊಬೈಲ್ ಗೆ ಸಾರ್ವಜನಿಕರು ಕರೆ ಮಾಡಿ ಉಚಿತ ಕಾನೂನಿನ ಸಲಹೆ ಮತ್ತು ಸಹಾಕರ ನೀಡುವ ಬಗ್ಗೆ ಕೋರಿಕೊಳ್ಳುತ್ತಿದ್ದರು. ಸದರಿ ಮೊಬೈಲ್ ನಮ್ಮ ಸಾಹೇಬರ ಬಳಿ ಇತ್ತು. ದಿನಾಂಕಃ **30.11.2023** ರಂದು ಸದರಿ ಮೊಬೈಲ್ ಗೆ ಸಾಕಷ್ಟು ಕರೆಗಳು ಬರುತ್ತಿದ್ದವು. ಸದರಿ ಕರೆಗಳನ್ನು ನಮ್ಮ ಸಾಹೇಬರು ಸ್ವೀಕರಿಸಿದ್ದರು.

ಈ ಹಂತದಲ್ಲಿ ಮುಖ್ಯ ವಿಚಾರಣೆಯನ್ನು ಮುಂದುಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.